15

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಗೃಹ - ಹಿರಿಯ ನಾಗರಿಕರು

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 16/6/2020

# ಹಿರಿಯರ ನೆರವಿಗೆ ಆ್ಯಪ್

## ಆರಕ್ಷಕ ಆಯುಕ್ತರಿಂದ ಬಿಡುಗಡೆ । ನಗರದಲ್ಲಿ 20 ಲಕ್ಷ ವೃದ್ಧರು

16.6.20

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜ್ಯ ರಾಜಧಾನಿಯಲ್ಲಿ 20 ಲಕ್ಷ ಹಿರಿಯ ನಾಗರಿಕರಿದ್ದು, ಅವರ ರಕ್ಷಣೆ ನಮ್ಮ ಮುಖ್ಯ ಉದ್ದೇಶವಾಗಿದೆ. ಹಿರಿಯ ನಾಗರಿಕರ ರಕ್ಷಣೆಯ ವಿಚಾರದಲ್ಲಿ ನಗರ ಪೊಲೀಸರು ಉತ್ತಮ ಕೆಲಸ ಮಾಡುತ್ತಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಭಾಸ್ಕರ್ ರಾವ್ ತಿಳಿಸಿದ್ದಾರೆ.

**» ಎಲ್ಡರ್‌ಲೀ ಪ್ರೊಟೆಕ್ಷನ್ ಪ್ರಾಜೆಕ್ಟ್ ಅಪ್ಲಿಕೇಷನ್**

ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸೋಮವಾರ ನಡೆದ 'ವರ್ಲ್ಡ್ ಎಲ್ಡರ್ ಅಬ್ಯೂಸ್ ಅವೇರ್‌ನೆಸ್ ಡೇ-2020' ಸಮಾರಂಭ ಉದ್ಘಾಟಿಸಿ 'ಬೆಂಗಳೂರು ಎಲ್ಡರ್‌ಲೀ ಪ್ರೊಟೆಕ್ಷನ್ ಪ್ರಾಜೆಕ್ಟ್' ಸಹಾಯವಾಣಿ ಆ್ಯಪ್ ಬಿಡುಗಡೆಗೊಳಿಸಿ ಮಾತನಾಡಿದರು.

ಹಿರಿಯ ನಾಗರಿಕರ ಸಹಾಯವಾಣಿಯು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿದ್ದು, ಹಿರಿಯರಿಗೆ ಸಹಕಾರಿಯಾಗಿದೆ. ಹಿಂಸೆ ಅನುಭವಿಸುತ್ತಿರುವ ಹಿರಿಯ ನಾಗರಿಕರು ಬೆಂಗಳೂರು ಎಲ್ಡರ್‌ಲೀ ಪ್ರೊಟೆಕ್ಷನ್ ಪ್ರಾಜೆಕ್ಟ್ ಆ್ಯಪ್ ಮೂಲಕ ದೂರು ದಾಖಲಿಸಬಹುದು. ಅಲ್ಲದೆ, 1090 ಉಚಿತ ಸಹಾಯವಾಣಿ ನಂಬರ್‌ಗೆ ಕರೆ ಮಾಡಿಯೂ ದೂರು ದಾಖಲಿಸಲು ಅವಕಾಶಗವಿದೆ. ಮುಂದಿನ ದಿನಗಳಲ್ಲಿ ಹಿರಿಯ ನಾಗರಿಕರಿಗಾಗಿ ಸೆಮಿನಾರ್‌ಗಳನ್ನು ಆಯೋಜಿಸಿ ಪೊಲೀಸ್ ಠಾಣಾ ಮಟ್ಟದಲ್ಲಿ ಅವರ ರಕ್ಷಣೆಯನ್ನು ಬಲಪಡಿಸಲು ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದರು.



ವಿಜಯವಾಣಿ ಚಿತ್ರ

ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಆಯೋಜಿಸಿದ್ದ ಆ್ಯಪ್ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಸ್ಕರ್‌ರಾವ್, ಡಿಸಿಪಿಗಳಾದ ಇಶಾ ಪಂತ್, ನಿಶಾ ಜೇಮ್ಸ್ ಉಪಸ್ಥಿತರಿದ್ದರು.

**ಮಹಾನಗರದಲ್ಲಿನ ಹಿರಿಯ ನಾಗರಿಕರಿಗೆ ರಕ್ಷಣೆ ಒದಗಿಸುವುದು ನಮ್ಮ ಉದ್ದೇಶವಾಗಿದೆ. ಜನಸಂಖ್ಯೆಗೆ ಅನುಗುಣವಾಗಿ ಪೊಲೀಸ್ ಬಲ ಕಡಿಮೆ ಯಿದ್ದರೂ ಹಿರಿಯ ನಾಗರಿಕರ ರಕ್ಷಣೆಯ ವಿಚಾರದಲ್ಲಿ ಬೇರೆ ನಗರಗಳಿಗಿಂತ ನಮ್ಮ ಪೊಲೀಸರು ಉತ್ತಮ ಕೆಲಸ ಮಾಡಿದ್ದಾರೆ.**
**। ಭಾಸ್ಕರ್ ರಾವ್ ನಗರ ಪೊಲೀಸ್ ಆಯುಕ್ತ**

ಬೆಂಗಳೂರು ಪೊಲೀಸರಿಗೆ ಹಿರಿಯರಿಂದ ಸಾಲು-ಸಾಲು ದೂರುಗಳು ಬರುತ್ತಿರುವ ಹಿನ್ನೆಲೆಯಲ್ಲಿ ಈ ಆ್ಯಪ್ ರೂಪಿಸಲಾಗಿದೆ. ಹಿರಿಯರು ಒಂಟಿಯಾಗಿದ್ದರೆ ಅವರ ಬಗ್ಗೆ ಗಸ್ತು ಪೊಲೀಸರು ನಿಗಾ ವಹಿಸಬೇಕು. ಅವರೊಂದಿಗೆ ಆಪ್ತ ಸಮಾಲೋಚನೆ ನಡೆಸಬೇಕು. ಪಿಂಚಣಿ ದೊರಕಿಸಲು ಅವರಿಗೆ ನೆರವಾಗಬೇಕು ಎಂದು ಪೊಲೀಸ್ ಸಿಬ್ಬಂದಿಗೆ ಭಾಸ್ಕರ್‌ರಾವ್ ಕಿವಿಮಾತು ಹೇಳಿದರು.

ಆಡಳಿತ ವಿಭಾಗದ ಡಿಸಿಪಿ ನಿಶಾ ಜೇಮ್ಸ್, ಕಮಾಂಡ್ ಸೆಂಟರ್‌ನ ಡಿಸಿಪಿ ಇಶಾ ಪಂತ್, ದಕ್ಷಿಣ ವಿಭಾಗದ ಡಿಸಿಪಿ ರೋಹಿಣಿ ಕಟೋಚ್ ಸೆಪಟ್ ಮತ್ತಿತರರು ಉಪಸ್ಥಿತರಿದ್ದರು.